# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :** 8(27)
**ಸದಸ್ಯರ ಹೆಸರು :** ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ :** 27.01.2026
**ಉತ್ತರಿಸುವವರು :** ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೌರಾಡಳಿತ ಇಲಾಖೆಯಿಂದ ನಗರದ ರಸ್ತೆಗಳಲ್ಲಿ ಬ್ಯಾನರ್ ಅಳವಡಿಸಲು ಇರುವ ನಿಯಮಗಳೇನು: (ವಿವರ ಒದಗಿಸುವುದು): | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರಡಿ ಕಲ್ಪಿಸಲಾದ ಅವಕಾಶಗಳಂತೆ ಜಾಹಿರಾತು ಪ್ರದರ್ಶನ ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. |
| ಆ) | ಚಿಕ್ಕಬಳ್ಳಾಪುರ ಶಿಡ್ಲಘಟ್ಟದಲ್ಲಿ ಬ್ಯಾನರ್ ವಿಷಯದಲ್ಲಾದ ಗಲಾಟೆಗೆ ಪೌರಾಡಳಿತ ಇಲಾಖೆಯ ಬೇಜಾವಾಬ್ದಾರಿ ಕಾರಣ ಎಂಬುದರ ಕುರಿತು ಸರ್ಕಾರದ ನಿಲುವೇನು: (ವಿವರ ನೀಡುವುದು): | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಪ್ರಕರಣ 136 ರಡಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಜಾಹಿರಾತುಗಳನ್ನು ಪ್ರದರ್ಶಿಸಲು ಅವಕಾಶ ಇರುವುದಿಲ್ಲ. ಸದರಿ ಕಾರ್ಯ್ವೆಯನ್ವಯ ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತರು ಅನಧಿಕೃತ ಜಾಹಿರಾತನ್ನು ತೆರವುಗೊಳಿಸಿರುತ್ತಾರೆ. ಪೌರಾಯುಕ್ತರು ನಗರಸಭೆ ಶಿಡ್ಲಘಟ್ಟ ಇವರು ಕಾರ್ಯ್ವೆಯಲ್ಲಿನ ಅವಕಾಶಗಳಂತೆ ಅನಧಿಕೃತ ಜಾಹಿರಾತನ್ನು ತೆರವುಗೊಳಿಸಿರುವುದು ಕಂಡುಬಂದಿದ್ದು ಇದರಲ್ಲಿ ಈ ಇಲಾಖೆಯ ಬೇಜವಾಬ್ದಾರಿ ಎಂಬುದು ಕಂಡುಬಂದಿರುವುದಿಲ್ಲ. |
| ಇ) | ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವಾಗ ಪೌರಾಡಳಿತ ಇಲಾಖೆಯಿಂದ ಶುಲ್ಕ ಸಂಗ್ರಹಿಸಲಾಗುತ್ತಿದೆಯೇ: ಇಲ್ಲವಾದಲ್ಲಿ ಸಂಗ್ರಹಿಸದಿರಲು ಕಾರಣವೇನು: | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ಖಾಸಗಿ ಜಾಗಗಳಲ್ಲಿ ಅಳವಡಿಸಲಾಗುತ್ತಿರುವ ಜಾಹೀರಾತು ಫಲಕಗಳಿಗೆ ವಿಧಿಸಲಾಗುತ್ತಿರುವ ತೆರಿಗೆ ಅಥವಾ ಶುಲ್ಕಕ್ಕೆ ಸಂಬಂಧಿಸಿದಂತೆ ರಿಟ್ ಪಿಟಿಷನ್ ನಂ. 9936/2019 (LB-RES) ಹಾಗೂ ರಿಟ್ ಪಿಟಿಷನ್ ನಂ. 15016/2019 (LB-TAX) ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 30-11-2022 ರಂದು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.<br><br>(ii) The provisions of Section 103(b) (vi) and Section 134 of the Municipal Corporation Act 1976 providing power to the Municipal Corporation to levy tax on advertisement is declared unconstitutional and void and the same are struck down.<br><br>(iii) Consequently the words "after the levy of the tax and that Section 134 has been determined by the Corporation "found in Sections 135(1), 135(2)(ii) ,135(3), 139 and Schedule VIII to the Municipal Corporation Act, 1976 and the Rules/Bye laws framed by the Municipal Corporations in the State pursuant to the said provision is also declared unconstitutional and void and the same to the said extent are struck down. |

| | | |
|---|---|---|
| | | (iv)Similarly, Section 94(1)(b)(Xiii) including explanation thereto, Section 94(1-B) and the words "after the levy of tax under Section 94 has been determined by the Municipal Council "in Section 133(1),Section (2) (ii), Section 133(3) proviso-(iv) to Section 142, Section 324(1) (ff) and Schedule VII ti the Karnataka Municipalities Act 1964 along with rules framed by the Municipalities in the State pursuant to the said provisions are declared unconstitutional and to that extent are struck down.<br>ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ: 30-11-2022ರ ಮಾನ್ಯ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೇಲ್ಮನವಿ ದಾವೆ ಸಂಖ್ಯೆ: 415/2025ಯನ್ನು ದಾಖಲಿಸಲಾಗಿದೆ. ಈ ಪ್ರಕರಣವು ವಿಚಾರಣಾ ಹಂತದಲ್ಲಿದೆ. |
| ಈ) | ಅಳವಡಿಸಲಾದ ಬ್ಯಾನರ್-ಪೋಸ್ಟರ್, ಬಾವುಟ ಹಾಗೂ ಜಾಹೀರಾತುಫಲಕಗಳನ್ನು ತೆರುವುಗೊಳಿಸುವ ಪೌರಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುವ ಕುರಿತು ಸರ್ಕಾರದ ನಿಲುವೇನು: (ವಿವರ ನೀಡುವುದು); | ಅಂತಹ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ. |
| ಉ) | ಅನುಮತಿ ಪಡೆಯದೆ ಅಕ್ರಮವಾಗಿ ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವವರ ಮೇಲೆ ಕೈಗೊಂಡ ಕ್ರಮಗಳೇನು: ಈ ಅಕ್ರಮಗಳಿಗೆ ಬಾರಿ ಪ್ರಮಾಣದ ದಂಡ ವಿಧಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಕರ್ನಾಟಕ ಪೌರಸಭೆಗಳ ಅಧಿನಿಯಮ ಪ್ರಕರಣ 136 ರಡಿ ಅನಧಿಕೃತ ಜಾಹಿರಾತನ್ನು ಅಳವಡಿಸಿದ್ದಲ್ಲಿ ಅಂತಹ ಜಾಹಿರಾತನ್ನು ತೆರವುಗೊಳಿಸಲು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು /ಮುಖ್ಯಾಧಿಕಾರಿಗಳಿಗೆ ಅಧಿಕಾರ ಇರುತ್ತದೆ.<br>ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) ಅಧಿನಿಯಮ 1981 ರ ಪ್ರಕರಣ 3 ರಲ್ಲಿ ಜಾಹಿರಾತುಗಳ ಮೂಲಕ ಅನಧಿಕೃತವಾಗಿ ಸಾರ್ವಜನಿಕ ದೃಷ್ಟಿಗೆ ಒಳಗಾಗಿರುವ ಯಾವುದೇ ಸ್ಥಳಗಳ ಮೇಲ ಅಂಟಿಸಿದರೆ/ ನಿಲ್ಲಿಸಿದರೆ/ ಪ್ರದರ್ಶಿಸಿದರೆ ಅಂತಹ ವ್ಯಕ್ತಿಗಳಿಗೆ 6 ತಿಂಗಳುಗಳ ವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾಗೃಹ ವಾಸ ಅಥವಾ ಒಂದು ಸಾವಿರರೂ, ಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಈ ಅಕ್ರಮಗಳಿಗೆ ಭಾರಿ ಪ್ರಮಾಣದ ದಂಡ ವಿಧಿಸುವ ಪ್ರಸ್ತಾಪವಿರುವುದಿಲ್ಲ. |

ಇ-ಸಂಖ್ಯೆ: ನಅಇ 1/ ಜಿಇಎಲ್ 2026 (ಇ)

( ರಹೀಂ ಖಾನ್ )

ಪೌರಾಡಳಿತ ಮತ್ತು ಹಜ್ ಸಚಿವರು